## ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ಸುದರ್ಶನ್ |
| ತಂದೆ/ಗಂಡನ ಹೆಸರು | :- | ಲೇಟ್ ಎಸ್ ರಾಘವಚಾರ್ |
| ವಯಸ್ಸು | :- | 58 ವರ್ಷ |
| ಉದ್ಯೋಗ | :- | ಪಿಎಸ್ ಐ |
| ವಾಸಸ್ಥಳ | :- | ಬನ್ನೂರು |

(ಸಾಕ್ಷಿಗೆ ದಿನಾಂಕಃ 22-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು 2017 ರಿಂದ 2019 ರವರೆಗೂ ಕೆ ಎಂ ದೊಡ್ಡಿ ಪೋ ಠಾಣೆಯಲ್ಲಿ ಎಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ 02-04-2019 ರಂದು ಚಾಸಾ-2, 3, 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮಂಡ್ಯ ಅಬಕಾರಿ ಇಲಾಖೆಗೆ ಅಮಾನತ್ತುಪಡಿಸಿದ ಮಧ್ಯವನ್ನು ನೀಡಲು ಕೋರಿಕೆ ಪತ್ರ ಸಲ್ಲಿಸಿದ್ದೆನೆ. ಸದರಿ ಕೋರಿಕೆಯ ಪತ್ರವನ್ನು ನಿಪಿ-6 ಎಂದು, ಸಾಕ್ಷಿಯ ಸಹಿ ನಿಪಿ-6 ಎ ಎಂದು ಗುರುತಿಸಲಾಯಿತು. ದಿ 20-06-2019 ರಂದು ಎಫ್ ಎಸ್ ಎಲ್ ವರದಿ ಪಡೆದಿರುತ್ತೇನೆ. ಸದರಿ ವರದಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿ ನಿಪಿ-5 ಎ ಎಂದು ಗುರುತಿಸಲಾಯಿತು. ದಿ 20-08-2019 ರಂದು ಮಂಡ್ಯ ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಅನುಮತಿ ಪಡೆದಿರುತ್ತೇನೆ. ಅನುಮತಿ ಪತ್ರವನ್ನು ನಿಪಿ- 7 ಎಂದು, ಸಾಕ್ಷಿಯ ಸಹಿ ನಿಪಿ-7 ಎ ಎಂದು ಗುರುತಿಸಲಾಯಿತು. ದಿ 13-09-2019 ರಂದು ಮೂಮಾ ನ್ನು ಮದ್ದೂರು ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಿರುತ್ತೇನೆ. ದಿ 16-09-2019 ರಂದು ಆರೋಪಿಯು ಮಧ್ಯ ಮಾರಾಟ ಮಾಡಲು ಪರವಾಗಿನ ಪಡೆದಿದ್ದಾನೋ ಇಲ್ಲವೂ ಎಂದು ಪಂಚಾಯಿತಿಯಿಂದ ವರದಿಯನ್ನು ಪಡೆದು ಅದರೊಂದಿಗೆ ಹೌಸ್ ಎಕ್ಸ್ ಟ್ರಾಕ್ಟ್ ನ್ನು ಪಡೆದಿರುತ್ತೆನೆ. ವರದಿ ನಿಪಿ-8 ಎಂದು, ಹೌಸ್ ಎಕ್ಸ್ ಟ್ರಾಕ್ಟ್ ನ್ನು ನಿಪಿ-9 ಎಂದು ಗುರುತಿಸಲಾಯಿತು. ನಂತರ ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ–11 ರವರಿಗೆ ಕಡತವನ್ನು ಹಸ್ತಾಂತರಿಸಿದ್ದು, ಸದರಿಯವರು ಕಡತವನ್ನು ಪರಿಶೀಲಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ –**

ನಾನು ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ಮಹಜರ್ ಸಾಕ್ಷಿದಾರರ ಹೇಳಿಕೆಗಳನ್ನು ಸಹ ಠಾಣೆಯಲ್ಲಿ ಪಡೆದಿರುತ್ತೇನೆ. 32 ಮೂಮಾ ಗಳನ್ನು ವಶಪಡಿಸಿಕೊಂಡು ತಂದಿದ್ದು ಅದರಲ್ಲಿ 1 ನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ. ಎಲ್ಲಾ ಮೂ ಮಾಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ತೊಂದರೆ ಇರಲಿಲ್ಲ. ನಾನು ಗ್ರಾಮ ಪಂಚಾಯಿತಿಯಿಂದ ಖಾತಾ ಎಕ್ಸ್ ಟ್ರಾಕ್ಟ್ ಪಡೆಯಲು ನಿವೇದನೆ ಮಾಡಿದ್ದೆ. ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ಸದರಿ ಖಾತಾ ಎಕ್ಸ್ ಟ್ರಾಕ್ಟ್ ನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಎಫ್ ಎಸ್ ಎಲ್ ವರದಿ ಮತ್ತು ಮಧ್ಯ ಅಬಕಾರಿ ಇಲಾಖೆಗೆ ಮಧ್ಯ ಹಸ್ತಾಂತರಿಸಿದ ಬಗ್ಗೆ ಸುಳ್ಳು ದಾಖಲೆ ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಚಾಸಾ-2, 3 ರವರು ಕಾರ್ಕಹಳ್ಳಿ ಗ್ರಾಮದವರಾಗಿರುತ್ತಾರೆ. ನಾನು ಸಾಕ್ಷಿದಾರರ ಯಾವುದೇ ಹೇಳಿಕೆಗಳನ್ನು ಪಡೆದಿಲ್ಲ ಮತ್ತು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಆರೊಪಿಯು ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದು ಎಂದೂ ಕೂಡ ಅಕ್ರಮ ಮಧ್ಯ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳಿಗಾಗಿ ಪ್ರಕರಣವನ್ನು ಸೃಷ್ಟಿ ಮಾಡಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೊಡುತ್ತಿದ್ದು, ಈ ಹಿಂದೆ ಎಂದೂ ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಆಗದದವರ ಮಾತನ್ನು ಕೇಳಿಕೊಂಡು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು